Sri DIGAMBARA RAO B. KALAMANKAR.—May I know how much money has been spent on the investigation so far ?

Sri VEERENDRA PATIL.—Sir, let the Hon'ble Member put a separate question.

ಶ್ರೀ ಎಲ್. ಶ್ರೀಕಂಠಯ್ಯ.—ಈ ಇನ್‌ವೆಸ್ಟಿಗೇಷನ್ನು 1961ರಲ್ಲಿ ಪ್ರಾರಂಭವಾಗಿದೆ. ಯೋಜನೆ ತೆಗೆದುಕೊಳ್ಳುವುದಕ್ಕೆ ದುಡ್ಡಿಲ್ಲ ಕಾಸಿಲ್ಲ ಎಂದು ಹೇಳುತ್ತೀರಿ. ಹಾಗಾದರೆ 1961ರಿಂದ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಅಧಿಕಾರಿಗಳಿಗೆ ಪುಲ್ ಎಂಪ್ಲಾಯಮೆಂಟ್ ಕೊಡಬೇಕೆಂದು ಈ ಇನ್‌ವೆಸ್ಟಿಗೇಷನ್ ನಾಟಕ ನಡೆಯುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇನ್‌ವೆಸ್ಟಿಗೇಷನ್ ಮಾಡಿ ಬ್ಲೂ ಪ್ರಿಂಟ್ ತಯಾರ್ಮಾಡುವುದರಿಂದ ಏನೂ ಕೆಡುವುದಿಲ್ಲ. ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಇದಕ್ಕಾಗಿಯೇ ಇದೆ. ನಮ್ಮ ರಾಜ್ಯದಲ್ಲಿ ಹರಿಯುವ ನದಿಗಳ ಉಪನದಿಗಳ ಬಗ್ಗೆ ಯಾವ ಯಾವ ಪ್ರಾಜೆಕ್ಟ್ ಮಾಡುವುದಕ್ಕೆ ಬರುತ್ತದೆ ಯಾವುದು ಸಾಧ್ಯವಾಗುತ್ತದೆ, ಫೀಸಿಬಿಲಿಟಿ ಏನು ಇದೆ, ಇದನ್ನು ಪರೀಕ್ಷೆ ಮಾಡಿ ಬ್ಲೂ ಪ್ರಿಂಟ್ ತಯಾರ್ಮಾಡಬೇಕು ಎಂದು ಸಿಬ್ಬಂದಿ ನೇಮಿಸಿದ್ದೇವೆ. ಅವರು ಈ ಕೆಲಸ ಮಾಡುತ್ತಿದ್ದಾರೆ. ಪ್ರಾಜೆಕ್ಟ್ ರಿಪೋರ್ಟ್ ಬಂದ ಮೇಲೆ ಹಣ ಒದಗಿಸುವ ಸಾಧ್ಯತೆ ನೋಡಿಕೊಂಡು ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ. ಮಾಡಿದ ಈ ಕೆಲಸ ಹಾಳಾಗುವುದಿಲ್ಲ.

Technical Clearance for Harangi and Hemavathi Project

161. Sri H. D. DEVE GOWDA (Holenarasipur).—

Will the Minister for Public Works be pleased to state :—

(*a*) whether the State Government has received the technical clearance from Government of India (Central Water and Power Commission) for Hemavathi and Harangi Project ;

(*b*) whether it is a fact that Madras Government has raised some objections as per the statement made by the Union Irrigation and Power Minister, Sri R. L. Rao, during the visit to the State in the month of October 1967 ;

(*c*) the nature of objection raised by the Madras Government ;

(*d*) the stand of the State Government in this behalf ;

(*e*) whether any meeting of the Chief Minister and Public Works Minister and top rank officials of both the States was held in presence of the Union Power and Irrigation Minister at Delhi ;

(*f*) if so, the result thereof ?

A.—Sri VEERENDRA PATIL (Minister for Public Works).—

(*a*) No.

(*b*) Yes. As per the statement appearing in the Press.

(*c*) Exact details not communicated by the Government of India.

(*d*) These projects have been prepared according to the 1924 agreement and hence cannot be objected to.

(*e*) No.

(*f*) Does not arise.

ಶ್ರೀ ಎಚ್. ಡಿ. ದೇವೇಗೌಡ.—ಪತ್ರಿಕೆಗಳಲ್ಲಿ ಬಂದಿರುವ ಹೇಳಿಕೆಯ ಪ್ರಕಾರ ನಿಜವಾಗಿದೆ. ಭಾರತ ಸರಕಾರದವರು ನಿರ್ದಿಷ್ಟ ವಿವರಗಳನ್ನು ತಿಳಿಸಿರುವುದಿಲ್ಲ ಎಂದು ಉತ್ತರ ಹೇಳಿದೆ. ಕೇಂದ್ರ ನೀರಾವರಿ ಮಂತ್ರಿಗಳ ಪತ್ರಿಕೆಯಲ್ಲಿಯ ಹೇಳಿಕೆ ಗಮನಕ್ಕೆ ಬಂದ ಮೇಲೆ ಮದ್ರಾಸಿನ ಸರಕಾರ ತಾಂತ್ರಿಕ ಅನುಮತಿ ಕೊಡಲು ಅಡ್ಡಿ ಮಾಡುತ್ತಿದ್ದಾರೆ ಎನ್ನುವುದಕ್ಕೆ ರಾಜ್ಯ ಸರಕಾರ ಅಸಕ್ತಿ ವಹಿಸಿದ್ದೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಹಾರಂಗಿ ಮತ್ತು ಹೇಮಾವತಿ ಈ ಎರಡು ಪ್ರಾಜೆಕ್ಟುಗಳಿಗೆ ಟೆಕ್ನಿಕರ್ ಕ್ಲಿಯರನ್ಸ್ ಕೊಡಬೇಕೆಂದು ಕೇಳುತ್ತಿದ್ದೇವೆ. ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರಕಾರಕ್ಕೆ ಕಾಗದ ಬರೆದಿದ್ದೇವೆ. ನಾನು ದಿಲ್ಲಿಗೆ ಹೋದಾಗ ಪ್ರತ್ಯಕ್ಷವಾಗಿ ಚರ್ಚೆ ಕೂಡ ಮಾಡಿದ್ದೇವೆ. ಈ ಪ್ರಾಜೆಕ್ಟ್ ವಿಚಾರದಲ್ಲಿ ಮದ್ರಾಸ್ ಸರಕಾರಕ್ಕೆ ಅವರ ಕಮೆಂಟ್ಸ್ ಸಲುವಾಗಿ ಕಳಿಸಿದ್ದಾರೆಂದು ತಿಳಿದು ಬಂದಿದೆ. ಯಾವ ಕಮೆಂಟ್ಸ್ ಎನ್ನುವುದಕ್ಕೆ ಆ ಮಾಹಿತಿ ನಮಗೆ ಬಂದಿಲ್ಲ. ಅದರ ಬಗ್ಗೆ ಕಾಗದ ಬರೆದರೂ ನಮಗೆ ಇನ್‌ಫರ್‌ಮೇಷನ್ ಕಳಿಸಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಕೇಂದ್ರ ಸರಕಾರ ಮಂಜೂರಾತಿ ಕೊಡದೇ ಇದ್ದರೆ ಈ ಕೆಲಸ ನೀವು ಕೈ ಬಿಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಇದು ಕೈಬಿಡುವ ಕೆಲಸವಲ್ಲ. ಟೆಕ್ನಿಕಲ್ ಕ್ಲಿಯರನ್ಸ್ ಕೊಡಿ ಎಂದು ಕೇಂದ್ರ ಸರಕಾರವನ್ನು ಕೇಳುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—1924ರ ಅಗ್ರಿಮೆಂಟ್ ಪ್ರಕಾರ ನಮಗೆ ಬರತಕ್ಕಂಥ ನೀರನ್ನು ಉಪಯೋಗಿಸುವ ಹಕ್ಕು ನಮಗೆ ಇದೆ. ಕೇಂದ್ರ ಸರಕಾರ ಮದ್ರಾಸ್ ಸರಕಾರವನ್ನು ಕೇಳತಕ್ಕಂಥ ಅವಶ್ಯಕತೆ ಏನು ಇತ್ತು ? ಇದರ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಹೇಮಾವತಿ ಮತ್ತು ಹಾರಂಗಿ ಎರಡು ಪ್ರಾಜೆಕ್ಟುಗಳು ಇವೆ. ಹೇಮಾವತಿ ಇದು ಷೆಡ್ಯೂಲ್ಡ್ ರಿವರ್. ಈ ಪ್ರಾಜೆಕ್ಟಿನಲ್ಲಿ ಎಷ್ಟು ನೀರು ಉಪಯೋಗಿಸಬೇಕು ಎನ್ನುವುದಕ್ಕೆ ಮತ್ತೊಂದು ಸರಕಾರವನ್ನು ಕೇಂದ್ರ ಸರಕಾರ ಕೇಳುವುದಕ್ಕೆ ಅಡ್ಡಿ ಏನೂ ಇಲ್ಲ. ಆದರೆ ಹಾರಂಗಿ ಇದು ನಾನ್-ಷೆಡ್ಯೂಲ್ಡ್ ರಿವರ್ ಇರುವುದರಿಂದ ಇದರ ಬಗ್ಗೆ ಅಗ್ರಿಮೆಂಟ್ ಪ್ರಶ್ನೆ ಬರುವುದಿಲ್ಲ. ಹಾರಂಗಿ ಯೋಜನೆ ಬಗ್ಗೆ ಮದ್ರಾಸ್ ಸರಕಾರಕ್ಕೆ ಏತಕ್ಕೆ ಕಳಿಸಿದ್ದೀರಿ ಎಂದು ನಾವು ಪ್ರೊಟೆಸ್ಟ್ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಒಂದು ಸಲ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಈ ಎರಡೂ ಯೋಜನೆಗಳು ಪ್ಲಾನಿಂಗ್ ಕಮಿಷನ್ನಿನ ಫೈನರ್ ಕ್ಲಿಯರನ್ಸ್ ಸಲುವಾಗಿ ಹೋಗಿದೆ ಎಂದು ಹೇಳಿರುವುದು ನಿಜವಲ್ಲವೇ ? ಈಗ ಈ ಆತಂಕ ಬರುವುದಕ್ಕೆ ಕಾರಣ ಏನು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ನಾನು ಹಾಗೆ ಹೇಳಿರಬಹುದು. ಸಬ್ ಕಮಿಟಿ ಮುಂದೆ ಈ ಎರಡೂ ಪ್ರಾಜೆಕ್ಟ್‌ಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕೆಂದು ಹೇಳಿದ್ದೇವೆ. ಸೆಂಟ್ರಲ್ ವಾಟರ್ ಅಂಡ್ ಪಾವರ್ ಕಮಿಷನ್ ಅವರು ಇನ್ನೂ ಕ್ಲಿಯರನ್ಸ್ ಕೊಟ್ಟಿಲ್ಲ. ಕ್ಲಿಯರನ್ಸ್ ಕೊಡದೇ ಅವರು ಮತ್ತೆ ಮತ್ತೆ ಇನ್‌ಫರ್‌ಮೇಷನ್ ಕೇಳುತ್ತಿದ್ದಾರೆ. ಇನ್‌ಸ್ಟಾರ್ ಮೆಂಟಿನಲ್ಲಿ ಇನ್‌ಫರ್‌ಮೇಷನ್ ಕೇಳುತ್ತಿದ್ದಾರೆ. ಕೇಳಿದ ಇನ್‌ಫರ್‌ಮೇಷನ್ ಕೊಟ್ಟರೂ ಮತ್ತೆ ಇನ್‌ಫರ್‌ಮೇಷನ್ ಬೇಕು ಎಂದು ಕೇಳುತ್ತಿದ್ದಾರೆ. ನಾವು ದಿಲ್ಲಿಗೆ ಹೋದಾಗ್ಗೆ ಇದರ ಬಗ್ಗೆ ಚರ್ಚೆ ಮಾಡಿ ಬಂದಿದ್ದೇವೆ. ಕೇಂದ್ರ ಸರಕಾರ ಈ ಎರಡೂ ಪ್ರಾಜೆಕ್ಟುಗಳಿಗೆ ಕ್ಲಿಯರನ್ಸ್ ಕೊಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾರೆ ಎಂಬುದು ನನಗೆ ಮನವರಿಕೆಯಾಗಿದೆ.

ಶ್ರೀ ಎಸ್. ಶಿವಪ್ಪ.—ಈ ಎರಡು ಯೋಜನೆಗಳನ್ನು ಕಾರ್ಯಗತ ಮಾಡುವುದರ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡತಕ್ಕದ್ದರಲ್ಲಿ ಎಷ್ಟು ಸಮಯ ಬೇಕೋ ಅದಕ್ಕಿಂತ ಹೆಚ್ಚಾಗಿ ಸಮಯ ತೆಗೆದು ಕೊಂಡಿರುವಾಗ ಆ ಬಗ್ಗೆ ನಮ್ಮ ಸರ್ಕಾರದವರು ಕೇಂದ್ರಕ್ಕೆ ಪ್ರತಿಭಟನೆಯನ್ನು ಸೂಚಿಸಿ ಅದಷ್ಟು ಜಾಗ್ರತೆ ಇದನ್ನು ಮಂಜೂರು ಮಾಡದೆ ಮಲತಾಯಿ ಧೋರಣೆಯನ್ನು ಮೈಸೂರಿನ ಬಗ್ಗೆ ಏಕೆ ತೋರಿಸುತ್ತಿದ್ದೀರಿ ಎಂದು ಕೇಳುವುದಕ್ಕೆ ಪ್ರಯತ್ನಪಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾವು ದಿಲ್ಲಿಗೆ ಹೋದಾಗಲೆಲ್ಲ ಮಾತನಾಡಿಕೊಂಡು ಬಂದಿದ್ದೇವೆ. ಎಲ್ಲ ಪ್ರಾಜೆಕ್ಟ್‌ಗಳಿಗೂ ಅದಷ್ಟು ತೀವ್ರ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕು, ಜನರು ಬಹಳ ಕಳವಳದಲ್ಲಡ್ಡಾರೆ, ಅಸಮಾಧಾನಗೊಂಡಿದ್ದಾರೆ ಎಂದು ಯಾವ ರೀತಿ ಎಷ್ಟು ಪ್ರಮಾಣದಲ್ಲಿ ಹೇಳ ಬೇಕಾಗಿತ್ತೋ ಅದೆಲ್ಲ ಮಾಡಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ಹಾರಂಗಿ ನಾನ್ ಷೆಡ್ಯೂಲ್ಡ್ ನದಿ, ಇದಕ್ಕೆ ಮದ್ರಾಸ್ ಸರ್ಕಾರದವರನ್ನು ಕೇಳಬೇಕಾದ ಅವಶ್ಯಕತೆ ಏನಿತ್ತು ಎಂದು ಹೇಳಿರುವುದಕ್ಕೆ ಇನ್ನೂ ಜವಾಬು ಬಂದಿಲ್ಲ ಎಂದು ಹೇಳಿದಿರಿ. ಅವರು ಜವಾಬು ಕೊಡದೆ ಇರತಕ್ಕದ್ದನ್ನು ನೋಡಿದರೆ ನಿಮಗೂ ಮತ್ತು ಕೇಂದ್ರ ಸರ್ಕಾರಕ್ಕೂ ಹೊಂದಾಣಿಕೆ ಇಲ್ಲ, ಕೇಂದ್ರದವರು ಮೈಸೂರು ಸರ್ಕಾರವನ್ನು ಅಲಕ್ಷ್ಯದಿಂದ ನೋಡುತ್ತಿದ್ದಾರೆ. ಇದು ನಿಮ್ಮ ಅನಹಾಯಕತೆಯನ್ನು ಸೂಚಿಸುವುದಿಲ್ಲವೇ? ಇದನ್ನು ಸರಿಪಡಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಹಾರಂಗಿ ಬಗ್ಗೆ ಅವರು ತಾತ್ಸಾರ ಮನೋಭಾವನೆಯಿಂದ ನೋಡುತ್ತಿದ್ದಾರೋ, ಮಲತಾಯಿ ಮನೋಭಾವನೆಯಿಂದ ನೋಡುತ್ತಿದ್ದಾರೋ ಎನ್ನುವಂಥದ್ದು ಹೇಳುವುದು ಕಷ್ಟ. ಆದರೆ ಹಾರಂಗಿ ಬಗ್ಗೆ ಇಂಟರ್‌ಪ್ರಿಟೇಷನ್‌ನಲ್ಲಿ ನಮಗೂ ಅವರಿಗೂ ವ್ಯತ್ಯಾಸ ಏದೆ. ಅದು ನಾನ್ ಷೆಡ್ಯೂಲ್ಡ್ ರಿವರ್ ಅಗ್ರಿಮೆಂಟಿನಲ್ಲಿ ಅದು ಬಂದಿಲ್ಲ, ಅದರ ಮೇಲೆ ಅಣೆ ಕಟ್ಟುವುದಕ್ಕೆ ನಮಗೆ ಸಂಪೂರ್ಣ ಅಧಿಕಾರವಿದೆ, ಯಾರನ್ನೂ ಇದರ ಬಗ್ಗೆ ಕೇಳಬೇಕಾಗಿಲ್ಲ ಎನ್ನುವುದು ನಮ್ಮ ನಿಲುಮೆ. ಆದರೆ ಅವರು ಹೇಳುವುದೇನೆಂದರೆ, ಇದು ಅಗ್ರಿಮೆಂಟಿನಲ್ಲಿ ಬರಲಾರದ್ದಕ್ಕೆ ಕಾರಣ ಆ ವೇಳೆಗೆ ಇದು ಮೈಸೂರಿನಲ್ಲಿ ಸೇರ್ಪಡೆಯಾಗಿರಲಿಲ್ಲ, ಕೊಡಗಿನಲ್ಲಆತ್ತು. ಕೊಡಗು ಪ್ರದೇಶ ಮೈಸೂರಿನಲ್ಲಿ ಇರಲಾರದ್ದಕ್ಕೆ ಮೈಸೂರು ಮತ್ತು ಮದ್ರಾಸಿಗೆ ಒಪ್ಪಂದ ವಾದಾಗ ಅದರಲ್ಲಿ ಇದು ಸೇರಲಿಲ್ಲ. ಅದರ ಮೇಲೆ ಏನು ಕಟ್ಟಿದರೂ ಕೂಡ ಅದರ ಪ್ರೊ ಕೃಷ್ಣರಾಜಸಾಗರದಿಂದ ಕೆಳಗೆ ಬರುತ್ತದೆ. ಅದ್ದರಿಂದ ಅಗ್ರಿಮೆಂಟಿಗೆ ಸೇರದೆ ಇದ್ದರೂ ಮದ್ರಾಸ್ ಸರ್ಕಾರದವರನ್ನು ಕೇಳಬೇಕು ಎನ್ನುವ ವಾದವನ್ನು ಮಾಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಹಾರಂಗಿ, ಹೇಮಾವತಿ ಪ್ರಾಜೆಕ್ಟ್‌ಗಳ ಬಗ್ಗೆ ಮದ್ರಾಸ್ ಸರ್ಕಾರವನ್ನು ಕೇಂದ್ರ ಸರ್ಕಾರದವರು ಕೇಳಿವ್ಯಾರೆ. ಆದರೆ ಮದ್ರಾಸ್ ಸರ್ಕಾರದವರು ಕೆಲವು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಾಗ ಅದೇ ರೀತಿಯಲ್ಲಿ ಮೈಸೂರಿನ ಅಭಿಪ್ರಾಯವೇನು ಎಂಬ ಬಗ್ಗೆ ನಮ್ಮನ್ನು ಅವರು ಕೇಳಿದ್ದಾರೆಯೇ? ಹಾಗೆ ಕೇಳದೆ ಇದ್ದರೆ ಈ ಎರಡು ಪ್ರಾಜೆಕ್ಟ್‌ಗಳ ಬಗ್ಗೆ ಮದ್ರಾಸ್ ಸರ್ಕಾರದವರ ಅಭಿಪ್ರಾಯವನ್ನು ಕೇಳುವುದಕ್ಕೆ ಕಳಿಸಿರುವುದರ ಔಚಿತ್ಯವಾದರೂ ಏನಿದೆ? ಇದು ಕೇಂದ್ರದಲ್ಲಿರುವ ನೀರಾವರಿ ಮಂತ್ರಿಗಳು ಮೈಸೂರು ರಾಜ್ಯ ಸರ್ಕಾರದ ಬಗ್ಗೆ ಕೊಟ್ಟಿರತಕ್ಕ ಅಲಕ್ಷ್ಯ ಮನೋಭಾವನೆ ಎಂದು ತಿಳಿದುಕೊಳ್ಳೋಣವೇ? ಇದಕ್ಕೆ ಸರಿಯಾದ ಪ್ರತಿಭಟನೆಯನ್ನು ನಲ್ಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮದ್ರಾಸ್ ಸರ್ಕಾರದವರು ಕಾವೇರಿ ಒಪ್ಪಂದಕ್ಕೆ ಒಳಪಡುವಂತೆ ಕಟ್ಟಿದಂಥ ಪ್ರಾಜೆಕ್ಟ್‌ಗಳಿಗೆ ನಮ್ಮ ಅಭಿಪ್ರಾಯವನ್ನು ಕೇಳಿದ್ದಾರೆಯೋ ಇಲ್ಲವೋ ಎನ್ನುವುದನ್ನು ರಿಕಾರ್ಡ್ ನೋಡಿ ಹೇಳಬೇಕು. ಆ ರಿಕಾರ್ಡ್ ಈಗ ನನ್ನ ಮುಂದೆ ಇಲ್ಲ. ನಮ್ಮ ಪ್ರಾಜೆಕ್ಟ್‌ಗಳ ಬಗ್ಗೆ ಮದ್ರಾಸ್ ಸರ್ಕಾರಕ್ಕೆ ಕಳಿಸಿದ್ದಕ್ಕಾಗಿ, ಅದರಲ್ಲಿಯೂ ಹಾರಂಗಿ ಪ್ರಾಜೆಕ್ಟ್ ಕಟ್ಟುವುದರ ಬಗ್ಗೆ ಕಳಿಸಿದ್ದಕ್ಕಾಗಿ ನಾವು ಪ್ರತಿಭಟನೆಯನ್ನು ಮಾಡಿದ್ದೇವೆ.

ಶ್ರೀ ಎರ್. ಎಸ್. ಶ್ರೀಕಂಠಯ್ಯ.—ಹಾರಂಗಿ, ಕಂಬದಕಡ, ಮೈಸೂರು ರಾಜ್ಯದ ವ್ಯಾಪ್ತಿಯೊಳಗೆ ಒಳಪಟ್ಟಿರುವಾಗ ಕೇಂದ್ರದ ನೀರಾವರಿ ಮತ್ತು ಪವರ್ ಕಮಿಷನ್‌ನವರು ಕ್ಲಿಯರೆನ್ಸ್ ಕೊಟ್ಟ ಹೊರತು ಯಾವ ಕಾರ್ಯವನ್ನೂ ಕೈಕೊಳ್ಳಬಾರದು ಎಂದು ಅಗ್ರಿಮೆಂಟಿಗೆ ಏನಾದರೂ ರುಜು ಮಾಡಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಅಗ್ರಿಮೆಂಟ್ ಪ್ರಶ್ನೆ ಇಲ್ಲ. ಈಗ ಇರುವಂಥ ಒಂದು ಪದ್ಧತಿ ಪ್ರಕಾರ ಎರಡು ಕೋಟಿ ರೂಪಾಯಿಗಿಂತ ಮೇಲ್ಪಟ್ಟಿರುವ ಎಲ್ಲಾ ಪ್ರಾಜೆಕ್ಟ್‌ಗಳಿಗೂ ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಬೇಕಾಗುತ್ತದೆ. ಆ ರೀತಿ ಚೆಕ್ಕಿಕರ್ ಕ್ಲಿಯರೆನ್ಸ್‌ಗೋಸ್ಕರ ಕೇಂದ್ರಕ್ಕೆ ಬರೆಯಬೇಕಾಗುತ್ತದೆ. ಚೆಕ್ಕಿಕರ್ ಕ್ಲಿಯರೆನ್ಸ್ ಇಲ್ಲ ಎಂದು ನಾವು ಕೈಕಟ್ಟಿ ಕೂತಿಲ್ಲ. ಹೇಮಾವತಿ ಯೋಜನೆಗೆ ಸಂಬಂಧಪಟ್ಟ ಎಲ್ಲ ಕೆಲಸವನ್ನೂ ಈಗ ಪ್ರಾರಂಭ ಮಾಡಿದ್ದೇವೆ. ಅವಕ್ಕಾಗಿ ಏನು ಚೆಕ್ಕಿಕರ್ ಕ್ಲಿಯರೆನ್ಸ್ ಬೇಕು ಅದಕ್ಕಾಗಿ ಕಾಯದೆ ಸಿಬ್ಬಂದಿ ವರ್ಗವರೆ ಮಂಜೂರು ಮಾಡಿ, ನಮ್ಮ ಹತ್ತಿರ ಏನು ಹಣವಿದೆ ಅದನ್ನು ಉಪಯೋಗ ಮಾಡಿ ಏನೇನು ಕೆಲಸ ಯೋಜನೆಗೆ ಸಂಬಂಧಪಟ್ಟ ಹಾಗೆ ಮಾಡಬೇಕಾಗಿದೆಯೋ ಅದನ್ನೆಲ್ಲ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—1924 ರ ಒಪ್ಪಂದದ ಪ್ರಕಾರ ಈ ಎರಡು ಯೋಜನೆಗಳಿಗೂ ಅಂದಾಜುಗಳನ್ನು ತಯಾರು ಮಾಡಿರುವಾಗ ಮೈಸೂರು ಸರ್ಕಾರದವರು ಇನ್ನೂ ಏಕೆ ಮೀನ ಮೇಷ ಎಣಿಸುತ್ತಿದ್ದೀರಿ? ಡೆಲ್ಲಿಯ ಕಡೆಗೆ ಏಕೆ ನೋಡುತ್ತಿದ್ದೀರಿ? ಇದರಲ್ಲಿ ನಿಮಗೆ ಬಂದಿರುವ ತೊಂದರೆಯಾದರೂ ಏನು?

ಶ್ರೀ ವೀರೇಂದ್ರ ಪಾಟೀಲ್.—ನಾವು ಇದಕ್ಕಾಗಿ ದೆಹಲಿಯ ಕಡೆಗೆ ನೋಡುತ್ತಿಲ್ಲ, ಚೆಕ್ನಿಕಲ್ ಕ್ಲಿಯರೆನ್ಸ್ ಬರುವುದು ಬರುತ್ತದೆ, ನಾವು ನಮ್ಮ ಪಾಡಿಗೆ ಮುಂದುವರೆಯುತ್ತಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—(ಈ) ಪ್ರಶ್ನೆಗೆ ಉತ್ತರವಾಗಿ 1924ನೇ ಇನವಿಯ ಒಪ್ಪಂದದ ಪ್ರಕಾರ ಈ ಯೋಜನೆಗಳನ್ನು ತಯಾರಿಸಿರುವುದರಿಂದ ಯಾವ ಆಕ್ಷೇಪಣೆಯನ್ನೂ ಎತ್ತುವಂತಿಲ್ಲ ಎಂದು ತಿಳಿಸಿದೆ. (ಆ) ಪ್ರಶ್ನೆಗೆ ಉತ್ತರವಾಗಿ ತಾಂತ್ರಿಕ ಮಂಜೂರಾತಿ ಬಂದಿಲ್ಲ ಎಂದು ಹೇಳಿದೆ. ಕೇಂದ್ರ ಸರಕಾರದ ಸಿ.ಡಬ್ಲ್ಯು.ಪಿ.ಸಿ. ಯವರು ಅದೇ ಕೆಲಸವಾಗಿ ಮಂಜೂರಾತಿ ಕೊಡಲು ವಿಧಾನ ಮಾಡುತ್ತಿದ್ದಾರೆಂಬ ಸಂಶಯವಿದೆಯೇ ? ಹಾರಂಗಿಯು ಷೆಡ್ಯೂರ್ಡ್ ರಿವರ್ ಅಲ್ಲ ವೆಂದು ಹೇಳಿದಿರಿ. ನಮ್ಮ ಒಪ್ಪಂದದ ಪ್ರಕಾರ 45 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಿ ಕೊಳ್ಳಲು ನಮಗೆ ಹಕ್ಕಿದೆ. ನಾವು ಉಪಯೋಗ ಮಾಡಿರುವುದು 27. ಹೀಗೆ ಅವಕಾಶ ಬೇಕಾದಷ್ಟಿದ್ದರೂ ಚೆಕ್ನಿಕಲ್ ಕ್ಲಿಯರೆನ್ಸ್ ಕೊಡುತ್ತಿಲ್ಲ. ಆಂಧ್ರದ ನೀರಾವರಿ ಹೆಚ್ಚಿಸಲು, ಮದ್ರಾಸಿನವರನ್ನು ಒಲಿಸಿಕೊಳ್ಳಲು ಹೀಗೆ ರಾಜಕೀಯ ಮಾಡುತ್ತಿದ್ದಾರೆ ಎಂದೇನಾದರೂ ಸರಕಾರಕ್ಕೆ ಅನುಮಾನವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂತೆ ರಾಜಕೀಯ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ. ಆದರೆ ಇಂಟರ್‌ಪ್ರಿಟೇಷನ್ನಿನಲ್ಲಿ ಸ್ವಲ್ಪ ಮತಭೇದವಿದೆ. ಮತ್ತು ಹೇಮಾವತಿಯ ನಲುವಾಗಿ ಕೇಂದ್ರದವರು ಮೇಲಿಂದಮೇಲೆ ಬೇರೆ ಬೇರೆ ಇನ್‌ಫರ್ಮೇಷನ್ ಕೇಳುತ್ತಿದ್ದಾರೆ. ನಾವು ಅದಕ್ಕೆ ನಿಮ್ಮ ಆಫೀಸರನ್ನು ಕಳಿಸಿ, ಬೇಕಾದ ಸಮಾಚಾರ ಒದಗಿಸುತ್ತೇವೆ ಎಂದು ತಿಳಿಸಿದ್ದೇವೆ. ಆದಾದ ಮೇಲೂ ಕೂಡ ಮತ್ತೆ ಬರೆದಿದ್ದಾರೆ. ಇದರಿಂದ ಕಾಲವ್ಯಯ ಮಾಡುತ್ತಿದ್ದಾರೇನೋ ಎಂಬ ಸಂದೇಹ ಬಂದಿದೆ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಎಸ್. ಶಿವಪ್ಪ.—ಕ್ಲಿಯರೆನ್ಸ್ ಇಷ್ಟೇ ಕಾಲದೊಳಗಾಗಿ ಕೊಡಬೇಕೆಂದು ಅವಧಿ ನಿಗದಿ ಮಾಡಿಲ್ಲದಿರುವುದರಿಂದ ಅನೇಕ ವರ್ಷಗಳಾದರೂ ಕೂಡ ಅದು ಬಾರದಿರುವುದರಿಂದ ಪ್ರಾರಂಭಿಸಬಹುದು ಎಂದು ತಿಳಿದುಕೊಂಡು ಒಪ್ಪಿಗೆ ಇದೆ ಎಂಬ ಭಾವನೆಯಿಂದ ಕೆಲಸ ಮುಂದುವರಿಸುತ್ತೇವೆಂದು ಕೇಂದ್ರ ಸರಕಾರಕ್ಕೆ ತಿಳಿಸುವುದು ಸಾಧ್ಯವೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ. ಕೇಂದ್ರದವರು ಕೆಲವು ಸಮಾಚಾರ ಕೇಳುತ್ತಿದ್ದಾರೆ. ಅವರು ಅನುಮತಿ ಕೊಡುವುದಿಲ್ಲವೆಂದು ಹೇಳಿಲ್ಲ. ಇಷ್ಟೇ ಕಾಲದಲ್ಲಿ ಕ್ಲಿಯರೆನ್ಸ್ ಕೊಡಬೇಕೆಂದೇನೂ ನಿಗದಿ ಮಾಡಿಲ್ಲ. ಈಗಿನ ರೀತಿಯನ್ನು ನೋಡಿದರೆ ಅವರು ಸ್ವಲ್ಪವಷ್ಟಿಗೆ ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಭಾವನೆ ಬರುತ್ತಿದೆ.

Sri J. P. SARWESH.—May I know what is the percentage of financial help that the Government of India is giving for completing this project ? If so, what amount has already been given ?

Sri VEERENDRA PATIL.—Whatever amount they give to our plans, we have to accommodate all these projects within that plan ceiling.

ಶ್ರೀ ಎಂ. ಬಸವರಾಜು.—ಹಾರಂಗಿ ಯೋಜನೆ ಕೆಲಸ ಬಹಳ ವಿಧಾನವಾಗಿರುವುದರಿಂದ ಕೇಂದ್ರ ಸರಕಾರವೇ ಅದನ್ನು ವಹಿಸಿಕೊಂಡು ಮಾಡಬೇಕೆಂದು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ತೆಗೆದುಕೊಳ್ಳುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಈಗಾಗಲೆ ಕೆಲವು ಕೆಲಸಗಳನ್ನು ಅವರು ವಹಿಸಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಅದಕ್ಕೆ ಉತ್ತರ ಬಂದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನೀವು ಅಲ್ಲಿನ ಮಂತ್ರಿಗಳು ರಾಜಕೀಯ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ ಎಂದು ಹೇಳಿದಿರಿ. ನಿಮಗೂ ಕೇಂದ್ರಕ್ಕೂ ನಡೆದಿರುವ ವ್ಯವಹಾರವನ್ನು ಸಭೆಯ ಮುಂದಿಟ್ಟರೆ, ಈ ಸಭೆ ತೀರ್ಮಾನ ಮಾಡಿ ಕೇಂದ್ರವನ್ನು ಒತ್ತಾಯಮಾಡಲು ಅವಕಾಶವಾಗುತ್ತದೆ. ಹಾಗೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಆವಶ್ಯಕತೆಯಿಲ್ಲ. ಸಭೆಗೆ ಬೇಕಾದ ಎಲ್ಲಾ ಸಮಾಚಾರವನ್ನೂ ನಾನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಇದರಲ್ಲಿ ರಹಸ್ಯವಾದುದೇನೂ ಇಲ್ಲ. ಪತ್ರವ್ಯವಹಾರ ನಡೆಸಿರುವುದನ್ನು ಎಷ್ಟೋ ಸಲ ಈ ಸಭೆಗೆ ಹೇಳಿದ್ದೇನೆ. ಪಾರ್ಲಿಮೆಂಟಿನ ಸದಸ್ಯರಿಗೂ ಸಹ ಎಲ್ಲಾ ಸಮಾಚಾರವನ್ನು ತಿಳಿಸಲಾಗಿದೆ.

Sri H. SIDDAVEERAPPA.—The only point that the Hon'ble Member wants to know and this House desires to know is, is this not a kind of inefficiency or helplessness of the Government because they are under some obligation to those people. Therefore, they do not press this. What is all this? This is not the only isolated instance. You said that you were going to refer the Krishna Water's dispute to arbitration but you never did it. You simply make a statement and keep quiet. Are we to be satisfied with your pious attitudes?

1.30 P.M.

ಶ್ರೀ ಬಿ. ದೊಡ್ಡಬೋರೇಗೌಡ.—1924ನೇ ಅಗ್ರಿಮೆಂಟ್ ಪ್ರಕಾರ 1974ನೇ ಇಸವಿಯಲ್ಲಿ ಎಷ್ಟು ಟಿ.ಎಂ.ಸಿ.ಎಫ್.ಟಿ. ನೀರನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇತ್ತು? ಅದರಲ್ಲಿ ಎಷ್ಟು ನೀರನ್ನು ಇದುವರೆಗೂ ಹಿಡಿದಿಟ್ಟುಕೊಂಡಿದ್ದೀರಿ? 74ನೇ ಇಸವಿಯಷ್ಟು ಹೊತ್ತಿಗೆ ಪೂರ್ತಿ ನೀರನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಿದೆಯೇ? ಅದಕ್ಕೆ ಏನು ಮುಂಜಾಗರೂಕತೆಯ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಒಂದೆರಡು ದಿವಸಗಳ ಹಿಂದೆ ಒಂದು ಪ್ರಶ್ನೆ ಬಂದಿತ್ತು, ಅದಕ್ಕೆ ಉತ್ತರ ಕೊಟ್ಟಿದ್ದೇನೆ, ಇದಕ್ಕೆ ಬೇಕಾಗುವಂತಹ ಯಾವ ವಿವರವೂ ಈಗ ಇಲ್ಲ, ಮಾನ್ಯ ಸದಸ್ಯರು ಮತ್ತೆ ವಿವರ ಬೇಕೆಂದರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಕೊಡುತ್ತೇನೆ.

ಶ್ರೀ ಎಸ್. ಭೀಮಣ್ಣ.—ಇಷ್ಟು ವರ್ಷವಾದ ನಂತರ ಟೆಕ್ನಿಕಲ್ ಕ್ಲಿಯರೆನ್ಸ್ ಬರುವ ಅವಶ್ಯಕತೆ ಇಲ್ಲ, ಮುಂದೆ ಹೋಗಬಹುದು ಅಂತ ಹೇಳಿ ಏನಾದರೂ ಒಂದು ಪ್ರೊವಿಜನ್ ಇದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಇಷ್ಟು ವರ್ಷದಲ್ಲೇ ಅವರು ಟೆಕ್ನಿಕಲ್ ಕ್ಲಿಯರೆನ್ಸ್ ಕೊಡ ಬೇಕು ಎಂದು ಹೇಳಿ ನಿಗದಿಯಾಗಿಲ್ಲ. ಈ ಪ್ರಾಜೆಕ್ಟು ಪ್ರಥಮತಃ 1962ರಲ್ಲಿ ಕಳುಹಿಸಿದ್ದೆವು, ಅದಾದ ಮೇಲೆ ಮಾಡಿಫಿಕೇಷನ್ ಹೇಳಿದರು ಅದನ್ನೆಲ್ಲಾ ಅಟೆಂಡ್‌ಮಾಡಿ ಅವರು ಹೇಳಿದ ಪ್ರಕಾರ ಕಳುಹಿಸಿದ್ದೇವೆ. ಮಾರ್ಚಿ ಅಥವಾ ಏಪ್ರಲ್ ತಿಂಗಳು 1955ರಲ್ಲಿ ಈ ಎರಡು ಪ್ರಾಜೆಕ್ಟುಗಳ ರಿಪೋರ್ಟು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬರದಿದ್ದರೂ ಕೂಡ ಪ್ರಾಜೆಕ್ಟ್ ಪ್ರಾರಂಭ ಮಾಡಿದ್ದೇವೆ, ಅದಕ್ಕೆ ಬೇಕಾದಂತಹ ಸರ್ಕಾರದಿಂದ ಕೊಡಬೇಕಾದಂತಹ ಏನೇನು ಹುಕುಂ ಕೊಡಬೇಕೋ ಅದನ್ನೆಲ್ಲಾ ಕೊಟ್ಟಿದ್ದೇವೆ ಎಂದು ತಿಳಿಸಿದರಿ. ಟೆಕ್ನಿಕಲ್ ಕ್ಲಿಯರೆನ್ಸ್ ಬರದೇ ಹೋದರೆ ಕೇಂದ್ರದಿಂದ ಬರಬೇಕಾದ ಹಣದ ಸೌಲಭ್ಯ ಏನಿದೆ ಅದು ಸಿಕ್ಕುವುದಿಲ್ಲ, ಅದು ತಮಗೆ ಗೊತ್ತಿರತಕ್ಕ ವಿಷಯ. ಅಂತಹ ಸಂದರ್ಭದಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಬರದಿದ್ದರೂ ಕೂಡ, ಈ ಹೇಮಾವತಿ ಪ್ರಾಜೆಕ್ಟು ಪೆಡ್ಡೂರ್ತ್ ರಿವರ್ ಆಗಿರುವುದರಿಂದ ರಾಜ್ಯಸರ್ಕಾರದಲ್ಲಿರತಕ್ಕ ರಿಸೋರ್ಸ್‌ನಿಂದಲೇ ಈ ಪ್ರಾಜೆಕ್ಟನ್ನು ಪೂರ್ತಿ ಮಾಡುವ ವಿಷಯದಲ್ಲಿ ಭರವಸೆ ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ, ಆದರೂ ಪ್ರಾಜೆಕ್ಟ್ ಕೆಲಸ ನಿಲ್ಲಿಸಿಲ್ಲ ಎಂದು ಹೇಳಿದೆ. ಕೇಂದ್ರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬರಲಾರದೇ ಹೋದರೆ ಸೆಂಟ್ರಲ್ ಏಡ್ ಬರುವ ಹಾಗಿಲ್ಲ ಅನ್ನುವಂತಹದು ಸರಿಯಲ್ಲ ಅಂತ ಕಾಣುತ್ತದೆ. ಏಕೆಂದರೆ, ಈ ವರ್ಷದ ಪ್ಲಾನ್‌ಗೆ ಅವರ ಅನುಮತಿ ಇದೆ. 45 ಲಕ್ಷ ರೂಪಾಯಿಗಳವರೆಗೂ ಹಾಕಿಕೊಂಡಿದ್ದೇವೆ. ಕ್ಲಿಯರೆನ್ಸ್ ಬಂದರೆ ಕಟ್ಟಲು ಬೇಕಾಗುವಂತಹ ಫಾರಿನ್ ಎಕ್ಸ್‌ಚೇಂಜ್ ಸಿಕ್ಕುತ್ತದೆ, ಅದಕ್ಕೆ ಬೇಕಾಗ ತಕ್ಕ ಮೆಷಿನರಿ ತರಿಸಿಕೊಳ್ಳುವುದಕ್ಕೆ ಅನುಕೂಲತೆಯಾಗುತ್ತದೆ ಅದಕ್ಕೇ ನಾವು ಒತ್ತಾಯ ಮಾಡುತ್ತಾ ಇದ್ದೇವೆ; ಅದೂ ಅಲ್ಲದೆ ಪ್ರಾಜೆಕ್ಟ್ ಕಟ್ಟಬೇಡಿರಿ ಎಂದು ಇಲ್ಲಿಯವರೆಗೂ ಯಾವುದೂ ಹೇಳಿಲ್ಲ. ಮದ್ರಾಸ್‌ನವರು ಪ್ರಾಜೆಕ್ಟ್ ಕಟ್ಟುವುದಕ್ಕೆ ವಿರೋಧವಾಗಿದೆ ಅಂತ ಅಲ್ಲ, ವರ್ಕ್ ಚೇಬಲ್ ಮಾಡುವುದರಲ್ಲಿ ವ್ಯತ್ಯಾಸ ಬರುತ್ತಾ ಇದೆ. ಇನ್ನು ಮುಂದೆ ಇಂಪೌಂಡಬಲ್ ನಷ್ಟ್ಸ್ ಏನಿದೆಯೋ ಅಷ್ಟು ನೀರು ತೆಗೆದುಕೊಳ್ಳಬೇಕೆಂಬ ಪ್ರಶ್ನೆ ಇರುವುದರಿಂದ ಆ ಮಾಹಿತಿ ಕೇಳುತ್ತಾ ಇದ್ದಾರೆ. ಆ ಮಾಹಿತಿ ಎಲ್ಲಾ ಇನ್ನೂ ಬಂದಿಲ್ಲ ಎಂದು ಹೇಳುತ್ತಾ ಇದ್ದಾರೆ; ಅದಕ್ಕೇ ತಡವಾಗುತ್ತಾ ಇದೆ.

Sri C. K. RAJAIAH SHETTY.—Technical clearance is purely technical and nothing else. So, where is the necessity of referring it to Madras?

ಶ್ರೀ ವೀರೇಂದ್ರ ಪಾಟೀಲ್.—ಹೇಮಾವತಿ ಪ್ರಾಜೆಕ್ಟ್ ಷೆಡ್ಯೂಲ್ಡ್ ರಿವರ್ ಇರುವುದರಿಂದ ಅವರು ಹೇಳುವುದೇನೆಂದರೆ, ಈ ಪ್ರಾಜೆಕ್ಟ್ ಕಟ್ಟುವುದರಿಂದ ಫ್ಲೋ ಏನು ಬರುತ್ತದೆ ಅದು ಡಿಸ್ಟರ್ಬ್ ಆಗಬಾರದು—ಅಗ್ರಿಮೆಂಟ್ ಪ್ರಕಾರ—ಅಂತ ಇದೆ. ಅದೂ ಅಲ್ಲದೇ ಇಂಪೌಂಡಬಲ್ ಸರ್‌ಪ್ಲಸ್ ಏನು ಇರುತ್ತದೆ ಆ ನೀರನ್ನು ಪಡೆದುಕೊಳ್ಳುತ್ತೇವೆ ಎಂದರೆ ನಮ್ಮ ಸ್ಟೇಟ್ ಇಂಟರೆಸ್ಟ್‌ಗೆ ಧಕ್ಕೆ ಬರಬಹುದು ಎಂದು ಅವರಿಗೆ ಭಯ ಇರುವುದರಿಂದ ಅನೇಕ ಮಾಹಿತಿಗಳನ್ನು ಕೇಳುತ್ತಾ ಇದ್ದಾರೆ.

Strike by the Contractors of C.I.T.B

162. Sri M. S. KRISHNAN (Malleswaram).—

Will the Minister for Home and Municipal Administration be pleased to state :—

(*a*) whether it has come to the notice of the Government that there is a virtual strike by the Contractors of the City Improvement Trust Board, Bangalore and considerable amount of work has been held up ;

(*b*) whether the City Improvement Trust Board has been unable to give the needed facilities/amenities such as roads, drainage, etc., in some of the new lay-outs (particularly industrial sites in and around Bangalore) in time ;

(*c*) whether any steps are being taken or under contemplation to get the work done departmentally ?

A.—Sri R. M. PATIL (Minister for Home and Municipal Administration).—

(*a*) No.

(*b*) No.

(*c*) Not necessary.

ಶ್ರೀ ಎಂ. ಎಸ್. ಕೃಷ್ಣನ್.—ನಗರಾಭಿವೃದ್ಧಿಯ ಮಂಡಲಯ ಕಂಟ್ರಾಕ್ಟರುಗಳು ರಾಜಾಜಿನಗರ, ಯಶವಂತಪುರ ಇಂಡಸ್ಟ್ರಿಯಲ್ ಎಸ್ಟೇಟ್ ಮತ್ತು ಬನ್ನಮಂಗಲ ಇತ್ಯಾದಿ ಬಡಾವಣೆಗಳಲ್ಲಿ ರಸ್ತೆ ಕೆಲಸವನ್ನು ಬಿಲ್ ಕ್ಲಿಯರ್ ಮಾಡಿಲ್ಲವೆಂದು ನಿಲ್ಲಿಸಿ ಆರು ತಿಂಗಳಿಂದ ಒಂದು ವರ್ಷದವರೆಗೂ ಬಿಲ್ಲುಗಳನ್ನು ಕ್ಲಿಯರ್ ಮಾಡದಿರುವುದರಿಂದ ಅಲ್ಲಿ ಕುರ್ಚಿಯಿಂದ ಹಿಡಿದು ಟೇಬಲ್ ವರೆಗೂ ಲಂಚದ ತನ್ನಯವಾಗಿ ಅವರು ಕೆಲಸ ನಿಲ್ಲಿಸಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅವರು ದೂರುಗಳನ್ನು ಕಳುಹಿಸಿದ್ದರು. ಅವುಗಳನ್ನು ವಿಚಾರಣೆ ಮಾಡಿದಾಗ ಅವರು ಕೊಟ್ಟಿದ್ದ ಕಾರಣಗಳು ಸಮಂಜಸವಾಗಿರಲಿಲ್ಲ. ಆದ್ದರಿಂದ ಅವುಗಳನ್ನು ನಿರಾಕರಿಸಲಾಯಿತು. ಈಗ ಅವರೇ ಮತ್ತೆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಕೆಲಸ ನಡೆಯುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗೆ ಎಷ್ಟು ಜನ ಕಂಟ್ರಾಕ್ಟರ ಬಿಲ್ಲುಗಳು ಪೇಮೆಂಟ್ ಆಗದೆ ಆರು ತಿಂಗಳಿಗೆ ಮೇಲ್ಪಟ್ಟು ಒಂದು ವರ್ಷದ ವರೆಗೆ ಇರತಕ್ಕ ಬಿಲ್ಲುಗಳೆಷ್ಟು ?

ಶ್ರೀ ಆರ್. ಎಂ. ಪಾಟೀಲ್.—ಕೆಲವು ಕೆಲಸಗಳು ದೋಷಗಳಿಂದ ಕೂಡಿದ್ದವು. ಕೆಲವು ಕೆಲಸಗಳು ಸರಿಯಾಗಿದ್ದವು. ದೋಷಯುತವಾಗಿದ್ದ ಕೆಲಸವನ್ನು ಅವರು ಮತ್ತೆ ಸರಿ ಮಾಡಿಸಿ ಕೊಡುತ್ತಿದ್ದಾರೆ. ಕೆಲಸ ನಡೆಯುತ್ತಿದೆ.